# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ರಾಜ್ಯ ಸಮಿತಿ, ಕರ್ನಾಟಕ

ಪ್ರಿಯ ಸಂಪಾದಕರೆ, ವರದಿಗಾರರೆ ಮತ್ತು ಮಾಧ್ಯಮ ಪ್ರತಿನಿಧಿಗಳೆ,

ನಮ್ಮ ಪಕ್ಷದ ರಾಜ್ಯ ಸಮಿತಿ ಸದ್ಯಸ್ಯರಾದ ಕಾ.ವಿಷ್ಣುವನ್ನು ಪೋಲೀಸರು ಬಂಧಿಸಿರುವುದಾಗಿ ಬಂದಿದ್ದ ವರದಿಯನ್ನು ಬಯಲಿಗೆಳೆಯುವ ನಮ್ಮ ಪತ್ರಿಕಾ ಹೇಳಿಕೆಯನ್ನು ಪರಿಗಣಿಸಿ ಪ್ರಕಟಿಸಿ ಸಹಕರಿಸ ಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

ಹೋರಾಟದಲ್ಲಿ ತಮ್ಮೊಂದಿಗೆ

25 ಮಾರ್ಚ್ 2009.

ಗಂಗಾಧರ್
ರಾಜ್ಯ ಸಮಿತಿ ಪರವಾಗಿ
ಸಿಪಿಐ (ಮಾವೋವಾದಿ)
ಕರ್ನಾಟಕ

---

ನಮ್ಮ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾ.ವಿಷ್ಣುರವರನ್ನು ಬಂಧಿಸಿರುವುದಾಗಿ ಟಿವಿ ಮಾದ್ಯಮಗಳಲ್ಲಿ ವರದಿಯಾಗಿತ್ತು.ಅಷ್ಟೇಯಲ್ಲದೆ ನಮ್ಮ ಪಕ್ಷದ ಜೊತೆ ಸಂಬಂಧವಿಲ್ಲದ ಅನಿತ ಎಂಬ ಮಹಿಳೆಯ ಜೊತೆ ಬಂಧಿಸಿರುವುದಾಗಿ ವರದಿಗಳು ಪ್ರಕಟವಾಗಿವೆ. ಆದರೆ ಇದು ಒಂದು ವದಂತಿಯಷ್ಟೆ ಕಾ. ವಿಷ್ಣು ಎಂದಿನಂತೆ ಕಾರ್ಯ ಚಟುವಟಿಕೆಯಲ್ಲಿದ್ದು ಸಂಪರ್ಕದಲ್ಲಿದ್ದಾರೆ. ಇದು ಪೋಲೀಸ್ ಅಧಿಕಾರಿಗಳು ಮತ್ತು ಕೆಲವು ಮಾಧ್ಯಮ ಪ್ರತಿನಿಧಿಗಳು ಸೇರಿ ಮಾಡಿರುವ ಪ್ರಚಾರವಾಗಿದೆ ಪಕ್ಷ, ಪಕ್ಷದ ಸಹಾನುಭೂತಿಗಳು ಮತ್ತು ಜನರ ಮಧ್ಯೆ ಗೊಂದಲ ಮಾಡಿಸುವುದು ಹಾಗೂ ಇನ್ನೊಮ್ಮೆ ಎನ್‌ಕಾಂಟರ್ ಎಂಬ ಹೆಸರಿನಲ್ಲಿ ಕಗ್ಗೊಲೆ ಮಾಡುವುದು ಎಂಬ ದುರುದ್ದೇಶದಿಂದ ಮಾಡಿರುವ ಪೋಲೀಸರ ಸಂಚಾಗಿದೆ ಸರ್ಕಾರ ಮತ್ತು ಪೋಲೀಸರ ಈ ಕೃತ್ಯವನ್ನು ನಾವು ಖಂಡಿಸುತ್ತೇವೆ.

ಪಕ್ಷಕ್ಕೆ ಸಂಬಂಧವಿಲ್ಲದ ಒಬ್ಬ ಮಹಿಳೆಯನ್ನು ಹೀಗೆ ಮಾವೋವಾದಿಯೆಂದು ಪ್ರಚಾರ ಮಾಡುವುದರ ಮೂಲಕ ಅವರ ಧ್ವನಿಯಡಿಗಿಸುವ ತಂತ್ರವನ್ನು ಮಾಡಲಾಗಿದೆ ಹಾಗೆ ಕಾ. ವಿಷ್ಣುರವರನ್ನು ಬಂಧಿಸಿರುವುದಾಗಿ ಪ್ರಚಾರ ಮಾಡುವುದರ ಮೂಲಕ ಅವರು ಒಂದು ನೀಚ ವಿಧಾನವನ್ನು ಅಳವಡಿಸುತ್ತಿದ್ದಾರೆ. ನಮ್ಮ ಚುಳುವಳಿಯನ್ನು ಹತ್ತಿಕ್ಕಲು ಅವರು ಅಳವಡಿಸುವ ಇಂತಹ ನೀಚ ತಂತ್ರಗಳಿಂದ ಕ್ರಾಂತಿಕಾರಿ ಚಳುವಳಿಯನ್ನು ಮುರಿಯಲು ಅವರಿಗೆ ಸಾಧ್ಯವಾಗುವುದಿಲ್ಲ. ದಮನ ಹೆಚ್ಚಸಿದಷ್ಟು ಕ್ರಾಂತಿ ಇನ್ನಷ್ಟು ಬಲಗೊಳುತ್ತದೆ ವಿನಃ ಅದು ಕುಸಿಯುವುದಿಲ್ಲ. ಹಾಗೆ ಕ್ರಾಂತಿಕಾರಿಗಳು ಸಹ ಎದೆಗುಂದುವುದಿಲ್ಲ. ಇದು ನಡೆಯಲಿರುವ ಚುನಾವಣಾ ನಾಟಕವನ್ನು ಕ್ರಾಂತಿಕಾರಿಗಳು ಬಯಲಿಗೆಳೆಯುವ ಕೆಲಸವನ್ನು ತಡೆಗಟ್ಟುವ ಪ್ರಯತ್ನವೂ ಆಗಿದೆ. ಇದು ಬಿಜೆಪಿ ಸರ್ಕಾರದ ಗೃಹ ಮಂತ್ರಿ ವಿ ಎಚ್ ಆಚಾರ್ಯರ ಫ್ಯಾಸಿಸ್ಟ್ ನೀತಿಯ ಒಂದು ಭಾಗವೆ ಆಗಿದೆ.

ಆದ್ದರಿಂದ ಜನರು ಈ ಪ್ರಚಾರವನ್ನು ನಂಬದೆ ಬಯಲಿಗೆಳಯ ಬೇಕೆಂದು ಕೇಳಿಕೊಳ್ಳುತ್ತೇವೆ ಪ್ರಗತಿಪರರು ಮತ್ತು ಪ್ರಜಾತಂತ್ರವಾದಿಗಳು ಧ್ವನಿಯಡಗಿಸಲು ಸರಕಾರ ನಡೆಸುವ ಈ ಅಪಕೃತ್ತವನ್ನು ಖಂಡಿಸ ಬೇಕೆಂದು ಮನವಿ ಮಾಡಿಕೊಳ್ಳುತ್ತೆವೆ.

ಕ್ರಾಂತಿಕಾರಿ ಶುಭಶಯಗಳೊಂದಿಗೆ,

ಗಂಗಾಧರ್
ರಾಜ್ಯ ಸಮಿತಿ ಪರವಾಗಿ
ಸಿಪಿಐ (ಮಾವೋವಾದಿ)
ಕರ್ನಾಟಕ